## ಅಧ್ಯಾಯ 6

# ಉಪಸಂಹಾರ

# ಅಧ್ಯಾಯ 6

# ಉಪಸಂಹಾರ

ತುಳು ಛಂದಸ್ಸಿನ ಬಗ್ಗೆ ನಡೆಸಿದ ಅಧ್ಯಯನದಲ್ಲಿ ನೇರವಾಗಿ ಮತ್ತು ಪರೋಕ್ಷವಾಗಿ ಕಂಡುಕೊಂಡ ವಿಚಾರಗಳ ಮುಖ್ಯಾಂಶಗಳನ್ನು ಈ ರೀತಿಯಾಗಿ ಸಂಗ್ರಹಿಸಬಹುದು.

1. ಈಗಾಗಲೇ ದೊರೆತ ಪ್ರಾಚೀನ ಕಾವ್ಯಗಳ ಆಧಾರದಲ್ಲಿ ತುಳುವಿಗೆ ಲಿಖಿತ ಕಾವ್ಯ ಪರಂಪರೆ ಹಾಗೂ ಸ್ವತಂತ್ರ ಲಿಪಿ ಇರುವುದು ದೃಢವಾಗಿದೆ.

2. ತುಳು ಲಿಪಿ ಮಲಯಾಳಂನಿಂದ ಎರವಲು ಪಡೆದದ್ದಲ್ಲ. ಆರ್ಯ ಎಟುತ್ತು ಅಥವಾ ತಿಗಳಾರಿ ಎಂದು ಕರೆಯಲಾಗುತ್ತಿದ್ದ ಲಿಪಿಯನ್ನು ತುಳುವರು ವೈದಿಕ ಸಾಹಿತ್ಯದ ಬರವಣಿಗೆಗಾಗಿ ಉಪಯೋಗಿಸುತ್ತಿದ್ದರು. ಅದೇ ಲಿಪಿ ತುಳು ಕಾವ್ಯಗಳ ಬರವಣಿಗೆಗಾಗಿ ಬಳಕೆಗೊಂಡಿದೆ ಮತ್ತು ಅದನ್ನೇ ಆಧಾರವಾಗಿಟ್ಟುಕೊಂಡು ಎಟು ತ್ತಚ್ಚನ್ ಮಲಯಾಳಂ ಲಿಪಿಯನ್ನು ರೂಪಿಸಿದನು.

3. ತುಳುವಿನಲ್ಲಿ ಕನ್ನಡದಲ್ಲಿಲ್ಲದ ಆ್ ಮತ್ತು ಸ್ಟ್ ಎಂಬ ಎರಡು ಧ್ವನಿಮಾಗಳಿವೆ. ಇವು ತುಳು ಛಂದಸ್ಸಿನ ಮಾತ್ರಾ ಮೌಲ್ಯ ನಿರ್ಣಯದಲ್ಲಿ ಸ್ವತಂತ್ರ ಲಘ್ವಕ್ಷರಗಳಾಗಿ ಕಾಣಿಸುತ್ತವೆ.

4. ಅಕ್ಷರದ ಮಾತ್ರಾಮೌಲ್ಯವು ಉಚ್ಚಾರಕ್ಕೆ ತೆಗೆದುಕೊಳ್ಳುವ ಕಾಲಾವಕಾಶವನ್ನು ಹೊಂದಿಕೊಂಡು ನಿರ್ಧಾರವಾಗುತ್ತದೆ.

5. ತುಳುವಿನಲ್ಲಿ ಪದ್ಯದದ ಲಿಖಿತ ರೂಪಕ್ಕನುಸಾರವಾಗಿ ಅಕ್ಷರಗಳ ಮಾತ್ರಾ ಮೌಲ್ಯವನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಬದಲಾಗಿ ಅಕ್ಷರ ಗಣ ಘಟಿತವೆಂದು ಹೇಳಲಾದ ಶಿಷ್ಟ ಛಂದಸ್ಸಿನ ವೃತ್ತ ರೂಪದ ಪದ್ಯಗಳಲ್ಲೂ ತಾಳದ ಆಧಾರದಿಂದಲೇ ಅಕ್ಷರಗಳ ಮಾತ್ರ ಮೌಲ್ಯವನ್ನು ನಿರ್ಧರಿಸಬೇಕಾಗುತ್ತದೆ.

6. ಸತಾಳವಾದ ಓದು ತುಳುವಿನ ಶಿಷ್ಟ ಕಾವ್ಯಗಳ ಛಂದಸ್ಸಿಗೆ ಅನಿವಾರ್ಯ. ಯಾವುದೇ ಕಾರಣಕ್ಕೂ ವಿತಾಳ ಓದು ತುಳು ಶಿಷ್ಟ ಕಾವ್ಯಗಳಿಗೆ ಹೊಂದಿಕೊಳ್ಳುವುದಿಲ್ಲ.

7. ಲಯಬದ್ಧವಾಗಿ ಓದುವ ಅಥವಾ ಹಾಡುವ ಉದ್ದೇಶದಿಂದ ತುಳುವಿನ ಪ್ರಾಚೀನ ಶಿಷ್ಟ ಕಾವ್ಯ ರೂಪುಗೊಂಡಿರಬೇಕು ಎನ್ನುವ ಊಹೆಗೆ ಸಾಕಷ್ಟು ಆಧಾರಗಳಿವೆ. ಸಂಸ್ಕೃತ, ಕನ್ನಡ ಮುಂತಾದ ಭಾಷೆಗಳಲ್ಲಿದ್ದ ಪುರಾಣ ಕಥಾನಕಗಳನ್ನು ಅನಕ್ಷರಸ್ಥರಾದ ತುಳುವರಿಗೂ ಪಾರಾಯಣ ರೂಪದಲ್ಲಿ ತಲುಪಿಸಲು ತುಳು ಕವಿಗಳು ಈ ಕಾವ್ಯಗಳನ್ನು ರಚಿಸಿದ್ದಾರೆ.

8. ಆದ್ದರಿಂದ ಪ್ರಾಚೀನ ತುಳು ಕಾವ್ಯಗಳು ಹಾಡುಗಬ್ಬಗಳೇ ಹೊರತು ಓದುಗಬ್ಬಗಳಲ್ಲ.

9. ಅಕ್ಷರಗಣ ಘಟಿತ ಛಂದಸ್ಸು ತುಳು ಪ್ರಾಚೀನ ಶಿಷ್ಟ ಕಾವ್ಯ ರಚನೆಗೆ ಆಧಾರವಾಗಿತ್ತು. ಆದರೆ ಅದರ ಗಣ ನಿಯಮಗಳನ್ನಾಗಲಿ, ವೃತ್ತ ನಿಯಮಗಳನ್ನಾಗಲಿ ನಿಯತವಾಗಿ ತುಳು ಕವಿಗಳು ಪಾಲಿಸಲಿಲ್ಲ. ಬದಲಾಗಿ ಸತಾಲವಾದ ಲಯಗಾರಿಕೆಯೇ ಅವರಿಗೆ ಮುಖ್ಯವಾಗಿತ್ತು.

10. ತುಳು ಶಿಷ್ಟ ಕಾವ್ಯಗಳಲ್ಲಿ ಅಕ್ಷರಗಳನ್ನು ಕರ್ಷಿಸುವ, ಶಿಥಿಲವಾಗಿ ಉಚ್ಚರಿಸುವ ಮತ್ತು ತ್ವರಿತವಾಗಿ ಉಚ್ಚರಿಸುವ ಕ್ರಮ ವ್ಯಾಪಕವಾಗಿದೆ. ಶಬ್ದಾದಿಯಲ್ಲಿ ದ್ವಿತ್ವವುಳ್ಳ ಸಂಸ್ಕೃತ ಶಬ್ದಗಳು ತುಳುವಿನಲ್ಲಿ ಶಿಥಿಲೋಚ್ಚಾರಕ್ಕೆ ಒಳಗಾಗುತ್ತವೆ.

11. ಶೇಕಡಾ 80ರಷ್ಟು ಪದ್ಯಗಳಲ್ಲಿ ದ್ವಿತೀಯಾಕ್ಷರ ಪ್ರಾಸವನ್ನು ಬಳಸಲಾಗಿದೆ. ಖಂಡ ಪ್ರಾಸವಿದೆ. ಪಾದದ ಕೊನೆಯಲ್ಲಿ ನಿಯತವಾಗಿ ಯತಿ ಬರುತ್ತದೆ. ಪಾದ ಮಧ್ಯಯತಿಯೂ ಇದೆ. ಇದು ಅಕ್ಷರಗಳ ಲೆಕ್ಕಾಚಾರದಲ್ಲಿ ಕಾಣಿಸುವ ಬದಲು ತಾಳದ ಆಧಾರದಲ್ಲೇ ರೂಪುಗೊಳ್ಳುತ್ತದೆ.

12. ಮಾತ್ರಾವೃತ್ತಗಳಲ್ಲಿ ಕಾಣಸಿಗುವ ಅತೀತಾಕ್ಷರ ಅಥವಾ ಅನಾಗತ ತುಳು ಪ್ರಾಚೀನ ಕಾವ್ಯಗಳಲ್ಲಿ ಕಂಡು ಬರುತ್ತದೆ. ಇದು ಸತಾಳತ್ವದ ಲಕ್ಷಣ. ಹಾಗೆಯೇ ಮುಡಿ ಮತ್ತು ಪದ್ಮ ಗಣಗಳೂ ವ್ಯಾಪಕವಾಗಿ ಬಳಕೆಯಾಗಿವೆ. ಗಣಪರಿ ವೃತ್ತಿಯೂ, ಪಾದ ಮಧ್ಯದಲ್ಲಿ ಒಂದು ಅಥವಾ ಎರಡು ಮಾತ್ರೆಗಳ ಮೌನವೂ ಸಣ್ಣ ಪ್ರಮಾಣದಲ್ಲಿ ಬಳಕೆಯಾದದ್ದು ಕಂಡು ಬಂದಿದೆ.

13. ಮನುಷ್ಯ ಸ್ವಭಾವದ ವಿಶ್ಲೇಷಣೆ, ಮೌಲ್ಯಗಳ ಪ್ರತಿಪಾದನೆಗಳಿಗಿಂತ ಭಕ್ತಿಯೇ ತುಳು ಕವಿಗಳಿಗೆ ಮುಖ್ಯವಾಗಿತ್ತು. ತಾವು ಸಂಸ್ಕೃತ, ಕನ್ನಡ ಭಾಷೆಗಳಲ್ಲಿರುವ ಕಥೆಯನ್ನು ತುಳು ಭಾಷೆಯಲ್ಲಿ ಹೇಳುತ್ತಿದ್ದೇವೆ ಎನ್ನುವ ಪ್ರಜ್ಞೆ ಅದನ್ನು ಪಾರಾಯಣಕ್ಕಾಗಿ ಬಳಸುವ ಉದ್ದೇಶ ಅವರಲ್ಲಿತ್ತು. ಅದೇ ಕಾರಣಕ್ಕೆ ಕುಮಾರವ್ಯಾಸ ಮತ್ತು ಚಾಟು ವಿಠಲನಾಥ ಅವರಿಗೆ ಆದರ್ಶ ಕವಿಗಳಾಗಿದ್ದರು.

14. ತುಳು ಪ್ರಾಚೀನ ಕವಿಗಳು ಸಂಸ್ಕೃತ – ಕನ್ನಡಗಳಲ್ಲಿ ಪಾಂಡಿತ್ಯವುಳ್ಳವರಾಗಿದ್ದರು.

15. ತ್ರಿಮೂರ್ತಿಗಣಬದ್ಧ ಷಟ್ಪದಿ ಕನ್ನಡಕ್ಕಿಂತ ದೊಡ್ಡ ಪ್ರಮಾಣದಲ್ಲಿ ತುಳುವಿನಲ್ಲಿ ಬಳಕೆಯಾಗಿದೆ.

16. ತುಳುವಿನಲ್ಲಿ ಬಳಕೆಯಾದ ಸಗಣ ಘಟಿತ ವೃತ್ತವು ಬೇರೆ ಯಾವುದೇ ಭಾಷೆಯ ಶಿಷ್ಟ ಸಾಹಿತ್ಯದಲ್ಲೂ ಬಳಕೆಯಾಗಿಲ್ಲ.

17. ಇತರ ಭಾಷೆಗಳಲ್ಲಿ ವಿರಳವಾಗಿ ಬಳಕೆಯಾದ ಛಂದೋಬಂಧಗಳನ್ನೇ ತುಳು ಕವಿಗಳು ಕಾವ್ಯ ರಚನೆಗಾಗಿ ಆರಿಸಿಕೊಂಡಿದ್ದಾರೆ.

18. ತುಳು ಛಂದಸ್ಸಿನ ಅಧ್ಯಯನ ದ್ರಾವಿಡ ಛಂದಸ್ಸಿನ ಅನನ್ಯತೆಯನ್ನು ಪತ್ತೆ ಹಚ್ಚುವುದಕ್ಕೆ ತುಂಬ ಸಹಕಾರಿಯಾಗಿದೆ.

19. ಅಕ್ಷರಗಳ ಮಾತ್ರಾ ಮೌಲ್ಯ ನಿರ್ಧಾರವಾಗುವುದು ಭಾಷೆಯ ವ್ಯಾಕರಣಬದ್ಧ ಲಿಖಿತ ರೂಪದಲ್ಲಲ್ಲ, ಹಾಡುವಾಗ

ಅಥವಾ ಓದುವಾಗ ಅಕ್ಷರದ ಉಚ್ಚಾರಕ್ಕೆ ತೆಗೆದುಕೊಳ್ಳುವ ಕಾಲಾವಕಾಶದ ಆಧಾರದಲ್ಲಿ. ಹಾಡುವ ಸಂದರ್ಭದಲ್ಲಿ ಮಾತ್ರವೇ ತುಳು ಛಂದಸ್ಸಿನ ಸ್ವರೂಪವನ್ನು ಗುರುತಿಸುವುದಕ್ಕೆ ಸಾಧ್ಯ. ಈ ಹಿನ್ನೆಲೆಯಿಂದ ಗಮನಿಸುವಾಗ ಕನ್ನಡದಲ್ಲಿ ದೇಸೀ ಛಂದಸ್ಸೆಂದು ಪರಿಗಣಿಸಲಾದ ತ್ರಿಮೂರ್ತಿಗಣಬದ್ಧ ಛಂದೋ ರೂಪಗಳ ಬಗ್ಗೆ ಸಂದೇಹಗಳು ಮೂಡುತ್ತವೆ. ತ್ರಿಮೂರ್ತಿಗಣಗಳ ಕಲ್ಪನೆ ತೀರಾ ಕೃತಕವಾಗಿ ತೋರುತ್ತದೆ. ಕಾರಣ, ತಾಳವೇ ಈ ಗಣಗಳನ್ನು ಗುರುತಿಸುವುದಕ್ಕಿರುವ ಮೂಲ ಮಾನ. ತಾಳ ಎಂದರೆ ಮಾತ್ರಾಸಮತ್ವ.

20. ತುಳು ದೇಸೀ ಕಾವ್ಯ ಸತಾಲವಾಗಿದೆ. ಒಂದೇ ತಾಳವಾದ್ಯದೊಂದಿಗೆ ಅಥವಾ ನಿರ್ದಿಷ್ಟ ಕಾಲಮಾನದಲ್ಲಿ ಆವರ್ತನೆಯಾಗುವ ಕ್ರಿಯೆಯೊಂದಿಗೆ ಅದನ್ನು ಹಾಡಲಾಗುತ್ತದೆ. ಈ ವಿಚಾರ ತುಳುವಿಗೆ ಮಾತ್ರ ಸೀಮಿತವಾದುದಲ್ಲ. ಕನ್ನಡದ ಗೀಗೀ ಪದಗಳು, ಕೋಲಾಟದ ಪದಗಳು, ಒನಕೆವಾಡು- ಇತ್ಯಾದಿಗಳನ್ನೂ ಮಲಯಾಳಂನ ಬೇರೆ ಬೇರೆ ಮಾದರಿಯ 'ನಾಡನ್ ಪಾಟ್ಟು'ಗಳನ್ನೂ ತಾಳವಾದ್ಯ ಅಥವಾ ನಿಶ್ಚಿತ ಕ್ರಿಯಾಖಂಡದ ಆವರ್ತನೆಯೊಂದಿಗೆ ಹಾಡಲಾಗುತ್ತದೆ. ಇವೆಲ್ಲ ಕಾಲಮಾತ್ರ ಸಮತ್ವವುಳ್ಳ ಗಣಘಟನೆಯನ್ನು ಹೊಂದಿವೆ.

21. ಅಂಶಗಣಗಳ ಆಧಾರದಲ್ಲಿ ತುಳು ದೇಸೀ ಛಂದಸ್ಸನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ತಾಳದ ಆಧಾರದಲ್ಲಿ ಮಾತ್ರ ಹೆಚ್ಚು ಖಚಿತವಾಗಿ ಮತ್ತು ಸರಳವಾಗಿ ಅದನ್ನು ಗುರುತಿಸಬಹುದು.

22. ಮಲಯಾಳಂನಲ್ಲಿ ಅಂಶ ಛಂದಸ್ಸಿಲ್ಲ. ದೇಸೀ ಛಂದಸ್ಸನ್ನು ಅವರು ಅಕ್ಷರ ಸಂಖ್ಯೆಯ ಆಧಾರದಲ್ಲಿ ಗುರುತಿಸುತ್ತಾರೆ. ಆದರೆ ಅಂತಿಮವಾಗಿ ತಾಳವೇ ದೇಸೀ ಛಂದಸ್ಸಿನ ಮೂಲಮಾನ ಎಂದು ಕೇರಳ ಕೌಮುದಿ ಪ್ರತಿಪಾದಿಸಿದೆ.

23. ಈ ಎಲ್ಲ ತೀರ್ಮಾನಗಳೂ ದ್ರಾವಿಡ ಛಂದಸ್ಸು ತಾಳ ಘಟಿತ ಎನ್ನುವುದನ್ನು ಸಾರಿ ಹೇಳುತ್ತವೆ.

24. ಛಂದಸ್ಸು ಅಕ್ಷರ ಅಥವಾ ಮಾತ್ರೆಗಳ ಲೆಕ್ಕಾಚಾರದ ಕೃತಕ ವ್ಯವಸ್ಥೆಯಲ್ಲ. ಅದು ಪದ್ಯದ ಅರ್ಥ ಹಾಗೂ ಭಾವನೆಗಳೊಂದಿಗೆ ತಾದಾತ್ಮ್ಯಗೊಂಡಿರುತ್ತದೆ. ನಿರ್ದಿಷ್ಟ ಛಂದಸ್ಸಿನಲ್ಲಿ ಬರೆಯಲು ಹೊರಟಾಗ ಭಾವಕ್ಕೆ ತೊಡಕಾಗುವಲ್ಲೆಲ್ಲ ನಿಯಮಗಳನ್ನು ಮೀರುವ ಸ್ವಾತಂತ್ರ್ಯವನ್ನು ತುಳು ಕವಿಗಳು ವಹಿಸಿಕೊಂಡಿದ್ದಾರೆ.

25. ದೇಸೀ ಕಾವ್ಯಗಳಿಗೆ, ಅವು ರಚನೆಗೊಳ್ಳುವಾಗ ನಿರ್ದಿಷ್ಟ ಲಯದ ಆಧಾರವಿರುತ್ತದೆಯೇ ಹೊರತು ಛಂದಸ್ಸಿನದಲ್ಲ. ಒಂದು ಲಯ ಹಿಡಿದು ಜನಪದ ಕವಿಗಳು ಹಾಡುತ್ತಾರೆ. ಹಾಡಿನ ಶಬ್ದಗಳು ಪರಂಪರೆಯಲ್ಲಿ ಬದಲಾಗುತ್ತ ಹೋಗಬಹುದು; ಆದರೆ ಲಯ ಬದಲಾಗುವುದಿಲ್ಲ. ಅಂದರೆ ಅವುಗಳಲ್ಲಿ ಉದ್ದೇಶಿತ ಲಯ ಇರುತ್ತದೆಯೇ ಹೊರತು ಛಂದಸ್ಸಲ್ಲ. ಹಾಗಾಗಿ ನಾವು ಲಯ ಮತ್ತು ತಾಳಗಳ ಆಧಾರದಲ್ಲೇ ಜನಪದ ಛಂದಸ್ಸನ್ನು ಗುರುತಿಸಬೇಕಾಗುತ್ತದೆ.

26. ಲಯ ಮತ್ತು ತಾಳ ಘಟಕಗಳು ಅರ್ಥ ಘಟಕದೊಂದಿಗೆ ತಾದಾತ್ಮ್ಯಗೊಂಡಿರುವುದು ಸಹಜವಾಗಿರುವುದರಿಂದ ಅರ್ಥ ಘಟಕವನ್ನೂ ಲಯವನ್ನೂ ಮುರಿದು ರೂಪಿಸುವ ಗಣ ವಿನ್ಯಾಸ ನಾವು ಹಾಡಿನ ಮೇಲೆ ಹೇರುವ

ಕೃತಕ ವ್ಯವಸ್ಥೆಯಾಗುತ್ತದೆ.

27. ಜನಪದ ಕಾವ್ಯಗಳಲ್ಲಿ ಗುರುಗಳ ಸಂಖ್ಯೆ ಹೆಚ್ಚು. ಲಘುಗಳನ್ನು ಕರ್ಷಿಸಿ ಗುರುಗಳಾಗಿ ಮಾಡಿ ಹಾಡುವುದು ತುಳುವಿನಲ್ಲಷ್ಟೇ ಅಲ್ಲ, ಕನ್ನಡವೇ ಮುಂತಾದ ಇತರ ಭಾಷೆಗಳಲ್ಲೂ ಕಂಡು ಬರುತ್ತದೆ.

28. ವಿಷ್ಣು ಗಣ ಎಂದರೆ ಐದು ಮಾತ್ರೆಯ ಉಚ್ಚಾರ ಕಾಲಾವಕಾಶವನ್ನು ಹೊಂದಿದ್ದೆಂದೂ, ಐದು ಮಾತ್ರೆಗಳ ಗಣಗಳೇ ಕನ್ನಡಕ್ಕೆ ಸಹಜವಾದವುಗಳೆಂದೂ ಛಂದಃಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಪ್ರಾಯೋಗಿಕವಾಗಿ ಪರಿಶೀಲಿಸಿದಾಗ ವಿಷ್ಣುಗಣಕ್ಕೆ ಆರು ಮಾತ್ರೆಗಳ ಉಚ್ಚಾರ ಮೌಲ್ಯ ಇರುವುದು ಕಂಡು ಬಂದಿದೆ. ತುಳು ದೇಸೀ ಕಾವ್ಯಗಳ ಹೆಚ್ಚಿನ ಮಟ್ಟುಗಳೂ ಆರು ಮಾತ್ರೆಯ ಗಣಗಳನ್ನು ಹೊಂದಿವೆ. ಸಾಮಾನ್ಯವಾಗಿ ಮೂರು ಗುರುಗಳು ಒಂದು ಗಣವನ್ನು ರೂಪಿಸುತ್ತವೆ ಮತ್ತು ಒಂದು ಅರ್ಥಘಟಕವಾಗಿರುತ್ತವೆ.

29. ಶಿಷ್ಟ ಕಾವ್ಯಗಳ ಛಂದಸ್ಸು ನಿಯಮಾವಳಿಗಳ ಆಧಾರದಲ್ಲಿ ರೂಪುಗೊಂಡಿರುವುದರಿಂದ ಪದ್ಯಗಳು ಛಂದಸ್ಸಿಗನುಗುಣವಾಗಿ ರಚನೆಗೊಂಡಿರುತ್ತವೆ. ಆದರೆ ದೇಸೀ ರಚನೆಗಳು ಹಾಗಲ್ಲ, ಅವು ಸ್ವತಂತ್ರವಾಗಿ ರೂಪುಗೊಂಡು, ಆಮೇಲೆ ಛಂದಸ್ಸನ್ನು ಆಳವಡಿಸಲಾಗುತ್ತದೆ. 3, 4, 5 ಮಾತ್ರೆಗಳ ಸೀಮಿತ ವ್ಯವಸ್ಥೆಗೆ ಅದನ್ನು ಒಗ್ಗಿಸಿ ಅಭ್ಯಾಸ ಮಾಡುವುದು ಯೋಗ್ಯವಲ್ಲ. ಅಲ್ಲಿ 3, 4, 5 ಮಾತ್ರೆಗಳ ವ್ಯಾಪ್ತಿಯ ಗಣಗಳಲ್ಲದೆ 6,7, 8, 10 ಮತ್ತು 12 ಮಾತ್ರೆಗಳ ವ್ಯಾಪ್ತಿಯ ಗಣಗಳೂ ಇವೆ.

30. ಸಾಮಾನ್ಯವಾಗಿ ದೇಸೀ ಕಾವ್ಯಗಳನ್ನು ತಾರ ಸ್ವರಸ್ಥಾಯಿಯಲ್ಲಿ ಸ್ವರಾಘಾತಗಳೊಂದಿಗೆ ಹಾಡಲಾಗುತ್ತದೆ. ಸ್ವರಾಘಾತಗಳು ತಾಳದೊಂದಿಗೆ ತಾದಾತ್ಮ್ಯ ಹೊಂದುವ ಬದಲು ಅರ್ಥದೊಂದಿಗೆ ಸಂಬಂಧ ಹೊಂದಿರುತ್ತವೆ. ಭೂತಾರಾಧನೆ ಪಾಡ್ದನಗಳು, ಕನ್ನಡದ ಕಂಸಾಳೆ ಪದಗಳು ಮುಂತಾಗಿ ಉದಾಹರಿಸಬಹುದು.

31. ಆಧುನಿಕ ತುಳು ಛಂದಸ್ಸು ಮಾತ್ರಾಗಣ ಘಟಿತವಾಗಿದ್ದು, ಕನ್ನಡ ಛಂದಸ್ಸಿನ ತದ್ರೂಪವಾಗಿ ಕಾಣಿಸುತ್ತದೆ. ಆಧುನಿಕ ತುಳು ಕಾವ್ಯ, ಪ್ರಾಚೀನ ತುಳು ಕಾವ್ಯದ ಮುಂದುವರಿಕೆಯಾಗದೆ, ಆಧುನಿಕ ಕನ್ನಡ ಕಾವ್ಯಕ್ಕೆ ಸಂವಾದಿಯಾಗಿ ಬೆಳೆದದ್ದೇ ಇದಕ್ಕೆ ಕಾರಣ.

ಯತಿ ಲಯವನ್ನು ನಿಯಂತ್ರಿಸುತ್ತದೆ. ಯತಿ ಅರ್ಥ ಘಟಕದೊಂದಿಗೆ ಸಂಬಂಧಹೊಂದಿದೆ. ಹಾಗಾಗಿ ಅಧ್ಯಯನದುದ್ದಕ್ಕೂ ಯತಿ, ಲಯ, ತಾಳ ಹಾಗೂ ಅರ್ಥಗಳನ್ನು ಪೂರಕವಾಗಿ ಪರಿಗಣಿಸಲಾಗಿದೆ.

ತುಳು ಛಂದಸ್ಸಿಗೆ, ಭಾಷೆಗೆ ಹಾಗೂ ಸಂಸ್ಕೃತಿಗೆ ಸಂಬಂಧಿಸಿದಂತೆ ಬೇರೆ ಬೇರೆ ನೆಲೆಗಳಲ್ಲಿ ಅಭ್ಯಾಸ ನಡೆಸುವುದಕ್ಕೆ ಈ ಅಧ್ಯಯನ ಅಡಿಪಾಯ ಹಾಕಿಕೊಡುತ್ತದೆ –

2. ಪ್ರಾಚೀನ ತುಳುವಿನಲ್ಲಿ ಸತಾಲ ಛಂದಸ್ಸು ಮಾತ್ರವೇ ಬಳಕೆಯಾದುದರ ಹಿಂದಿರುವ ಕಾರಣಗಳೇನು? ಎಲ್ಲ ಕವಿಗಳೂ ಒಂದೇ ಮಾದರಿಯ ಛಂದೋರೂಪಗಳನ್ನು ಬಳಸಿರುವುದರಿಂದ ತುಳುವಿಗೆ ಪ್ರತ್ಯೇಕ ಛಂದೋಪರಂಪರೆ ಇತ್ತೇ? ಸಂಸ್ಕೃತ, ಕನ್ನಡಗಳೆರಡರಲ್ಲೂ ಪಾಂಡಿತ್ಯವಿದ್ದ ತುಳುಕವಿಗಳು ಪಾರಾಯಣದ

ಉದ್ದೇಶದಿಂದ ಈ ಕಾವ್ಯಗಳನ್ನು ಬರೆದಿದ್ದಾರೆ. ಇದರ ಹಿಂದಿರುವ ಸಾಮಾಜಿಕ, ಸಾಂಸ್ಕೃತಿಕ ಕಾರಣಗಳ ಕುರಿತು ಅಧ್ಯಯನ ನಡೆಸಬಹುದು.

3. ಬೇರೆ ಬೇರೆ ಗತಿಗಳಲ್ಲಿ ಹಾಡಲಾಗುವ ದೈವ ಸಂಬಂಧೀ ಪಾಡ್ದನಗಳ ಲಯಕ್ಕೂ ಗತಿಗೂ, ಹಾಡುವ ಸಂದರ್ಭದ ನಂಬಿಕೆಗಳಿಗೂ ಇರುವ ಸಂಬಂಧಗಳ ಕುರಿತು ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಅವಕಾಶವಿದೆ.

4. ದ್ರಾವಿಡ ಛಂದಸ್ಸಿನ ಪರಿಕಲ್ಪನೆಯ ಬಗ್ಗೆ ಮಾಡಬಹುದಾದ ಸಂಶೋಧನೆಗಳಿಗೆ ಈ ಅಧ್ಯಯನ ಪ್ರಾಥಮಿಕ ವಿವರಗಳನ್ನು ಒದಗಿಸಿಕೊಡುತ್ತದೆ.